O.S. No. 95/2017

PW- 1

dated: 27-08-2019

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದೆ.</u>

<u>ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಬಿ ಆರ ಎ ವಕೀಲರಿಂದಃ</u>

1. ನನಗೆ ಖಚಿತವಾಗಿ ನನ್ನ ತಾಯಿ ನನ್ನ ಹೆಸರಿಗೆ ಯಾವಾಗ ಮುಖ್ತಾರ ನಾಮೆಯನ್ನು ಬರೆದು ಕೊಟ್ಟಿರುತ್ತಾಳೆ ಅಂತಾ ನನಗೆ ಹೇಳಲು ಬರುವುದಿಲ್ಲ ಆದರೇ ಒಂದು ವರ್ಷದ ಹಿಂದೆ ನನ್ನ ತಾಯಿ ನನ್ನ ಹೆಸರಿಗೆ ಮುಖ್ತಾರ ನಾಮೆಯನ್ನು ಬರೆದು ಕೊಟ್ಟಿರುತ್ತಾಳೆ . ಈ ದಾವೆಯನ್ನು ನನ್ನ ತಾಯಿ ಸಿದ್ದವ್ವ ಖುದ್ದಾಗಿ ಮಾಡಿರುತ್ತಾಳೆ . ದಾವಾ ಪತ್ರ ಬರೆಯಲು ವಕೀಲರಿಗೆ ಮಾಹಿತಿ ನನ್ನ ತಾಯಿಯೇ ಕೊಟ್ಟಿರುತ್ತಾಳೆ. ನನ್ನ ಹೆಸರಿಗೆ ಮುಖ್ತಾರ ನಾಮೆಯನ್ನು ಬರೆದು ಕೊಡುವವರೆಗೆ ನನ್ನ ತಾಯಿಯೇ ಈ ದಾವೆಯನ್ನು ನೋಡಿಕೊಳ್ಳುತ್ತಿದ್ದಳು ಅನ್ನುವುದು ನಿಜ .

2. ನನಗೆ ಕುಶಪ್ಪ ಹಾಗೂ ಕುಶ ಅಂತಲು ಕರೆಯುತ್ತಾರೆ ಅನ್ನುವುದು ನಿಜ . ನಾನು 9 ನೇ ವರ್ಗದವರೆಗೆ ಓದಿರುತ್ತೇನೆ . ನಿಮ್ಮ ತಾಯಿ ನಿಮಗೆ ಏನು ಬರೆದು ಕೊಟ್ಟಿರುತ್ತಾಳೆ ಅನ್ನುವ ವಿಷಯ ನಿಮಗೆ ಗೊತ್ತಿರುತ್ತದೆಯಾ ಅಂದರೆ ಸಾಕ್ಷಿದಾರರು ಮುಖ್ತಾರ ನಾಮೆಯನ್ನು ಬರೆದು ಕೊಟ್ಟ ವಿಷಯ ತನಗೆ ಗೊತ್ತಿರುತ್ತದೆ ಅಂತಾ ಹೇಳುತ್ತಾರೆ . ನನ್ನ ತಾಯಿ ನನಗೆ ಅವಳ ಪರವಾಗಿ ಖರಿದಿ ಪತ್ರ ಬರೆದು ಕೊಡಲು ಮತ್ತು ಸ್ವಾಧೀನ ಬಿಟ್ಟು ಕೊಡಲು ಕೂಡಾ ಅಧಿಕಾರ ಕೊಟ್ಟಿರುತ್ತಾಳೆ ಅನ್ನುವುದು ನಿಜ . ನನ್ನ ತಾಯಿ ನನ್ನ ಹೆಸರಿಗೆ ಅಧಿಕಾರ ಪತ್ರವನ್ನು ನೋಟರಿಯ ಸಮಕ್ಷಮ ಬರೆದು ಕೊಟ್ಟಿರುತ್ತಾಳೆ ಅನ್ನುವುದು ನಿಜ . ನನ್ನ ತಾಯಿ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾಳೆ ಅಂತಾ ಹೇಳುವ ಮುಖ್ತಾರ ನಾಮೆಯ ದಾಖಲೆಗಳ ಮೇಲಿಂದ ನನಗೆ ಅವಳ ಪರವಾಗಿ ಸಾಕ್ಷಿ

O.S. No. 95/2017
PW- 1
dated: 27-08-2019

ನುಡಿಯಲು ಅಧಿಕಾರವಿರುವುದಿಲ್ಲ ಅನ್ನುವುದು ಸುಳ್ಳು . 2017 ನೇ ಇಸವಿಯಲ್ಲಿ ನನ್ನ ತಾಯಿಗೆ 65 ವರ್ಷ ವಯಸ್ಸು ಆಗಿತ್ತು ಅಂದರೆ ಸಾಕ್ಷಿದಾರರು 67 ಅಥವಾ 68 ವರ್ಷ ವಯಸ್ಸು ಇದ್ದಿರಬಹುದು ಅಂತಾ ಹೇಳುತ್ತಾರೆ . ಮುಖ್ತಾರ ನಾಮೆಯನ್ನು 2018 ನೇ ಇಸವಿಯಲ್ಲಿ ಬರೆಯಿಸುವ ಸಮಯದಲ್ಲಿ ನನ್ನ ತಾಯಿಯ ವಯಸ್ಸನ್ನು 70 ವರ್ಷ ಅಂತಾ ಬರೆಯಿಸಿರುತ್ತೇನೆ ಅನ್ನುವುದು ನಿಜ . ನಮ್ಮ ಅನುಕೂಲಕ್ಕೆ ತಕ್ಕಂತೆ , ನನ್ನ ತಾಯಿಗೆ 70 ವರ್ಷ ವಯಸ್ಸಾಗಿತ್ತು ಅಂತಾ ಸುಳ್ಳು ಬರೆಯಿಸಿರುತ್ತೇವೆ ಅನ್ನುವುದು ಸುಳ್ಳು . ನನ್ನ ತಾಯಿ ಇವತ್ತು ಕೂಡಾ ಜಮೀನುಗಳಿಗೆ ಹೋಗಿ ಬರುವುದು , ಊರುಗಳಿಗೆ ಹೋಗಿ ಬರುವುದು ಮಾಡುತ್ತಾಳೆ ಅನ್ನುವುದು ಸುಳ್ಳು . ನಾನು ನನ್ನ ತಾಯಿಗೆ ಹೆದರಿಕೆ ಹಾಕಿ ನಿಪಿ -1 ಮುಖ್ತಾರ ನಾಮೆಯನ್ನು ಬರೆಯಿಸಿಕೊಂಡು , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸುಳ್ಳು .

3. ನನ್ನ ತಂದೆಯ ಹೆಸರು ಗುರುಸಿದ್ದಪ್ಪ ಮೇಟಿ . ನನ್ನ ತಾಯಿಯ ತವರು ಮನೆಯ ಅಡ್ಡಹೆಸರು ಅಜ್ಜಪ್ಪನವರ . ನನ್ನ ತಂದೆಯ ಊರು ಹೀರೆಬಾಗೇವಾಡಿ . ನನ್ನ ತಾಯಿಯ ತಂದೆ ಹೆಸರು ರುದ್ರಪ್ಪ ಅಜ್ಜಪ್ಪನವರ . ನನ್ನ ತಾಯಿಯ ತಂದೆ ರುದ್ರಪ್ಪನಿಗೆ ಗಂಡು ಮಕ್ಕಳು ಇದ್ದಿರಲಿಲ್ಲ ಅನ್ನುವುದು ನಿಜ . ಆ ಕಾರಣಕ್ಕಾಗಿ ರುದ್ರಪ್ಪ ಗಂಗಪ್ಪ ಅನ್ನುವವರನ್ನು ದತ್ತಕ ತೆಗೆದುಕೊಂಡಿದ್ದರು ಅನ್ನುವುದು ನಿಜ . ಗಂಗಪ್ಪನನ್ನು ದತ್ತಕ ತೆಗೆದುಕೊಂಡಿರುವ ಪೂರಕವಾಗಿ ದತ್ತಕ ಪತ್ರ ನೊಂದಾಗಿರುತ್ತದೆ ಅನ್ನುವುದು ನಿಜ . ದತ್ತಕ ತೆಗೆದುಕೊಂಡ ನಂತರ ಗಂಗಪ್ಪ ರುದ್ರಪ್ಪನೊಂದಿಗೆ ಇರುತ್ತಿದ್ದ ಅನ್ನುವುದು ನಿಜ . ಸದರಿ ಗಂಗಪ್ಪ ನನ್ನ ಖಾಸ ಅಣ್ಣನಿರುತ್ತಾನೆ ಅನ್ನುವುದು ನಿಜ . ನನ್ನ ತಾಯಿಗೆ , ಗಂಗಪ್ಪ , ಶಿವರಾಯಪ್ಪ , ನೀಲವ್ವ , ನಾನು ಕುಶ , ಲವ ಮತ್ತು ಈರಪ್ಪ ಅಂತಾ ಆರು

O.S. No. 95/2017
PW- 1
dated: 27-08-2019

ಜನ ಮಕ್ಕಳು . ನನ್ನ ಸಹೋದರ ಲವ ನಿಗೆ ಫಕೀರಪ್ಪ ಅಂತಲು ಕರೆಯುತ್ತಾರೆ ಅನ್ನುವುದು ನಿಜ . ನನ್ನ ತಾಯಿಯ ತಾಯಿ ಮೃತರಾಗಿರುತ್ತಾರೆ . ನನ್ನ ತಾಯಿಯ ತಂದೆ ರುದ್ರಪ್ಪ ದಿಃ 9-4-1997 ರಂದು ಮೃತರಾಗಿರುತ್ತಾರೆ ಅನ್ನುವುದು ನಿಜ . ರುದ್ರಪ್ಪ ತೀರಿಕೊಳ್ಳುವ ಸಮಯದಲ್ಲಿ ಆತನಿಗೆ ನನ್ನ ತಾಯಿ ಹಾಗೂ ಆತನ ದತ್ತಕ ಮಗ ಗಂಗಪ್ಪ ಇಬ್ಬರೇ ವಾರಸಾದಾರರು ಅನ್ನುವುದು ನಿಜ . ರುದ್ರಪ್ಪನಿಗೆ ನಾನು , ನೀಲವ್ವ , ಶಿವರಾಯಪ್ಪ , ಲವ / ಫಕೀರಪ್ಪ ಮತ್ತು ಈರಪ್ಪ ವಾರಸಾದಾರರಾಗಿರುವುದಿಲ್ಲ ಅನ್ನುವುದು ನಿಜ .

4. ಮೃತ ರುದ್ರಪ್ಪನಿಗೆ , ವೀರಾಪೂರ ಮತ್ತು ಅಮರಾಪೂರ ಹದ್ದಿಯಲ್ಲಿ ಆಸ್ತಿಗಳಿದ್ದವು ಅನ್ನುವುದು ಸುಳ್ಳು , ಆದರೇ ವೀರಾಪೂರದಲ್ಲಿ ಮಾತ್ರ ರುದ್ರಪ್ಪನಿಗೆ ಆಸ್ತಿಗಳಿದ್ದವು. ಅಮರಾಪೂರದಲ್ಲಿ ಸರ್ವೆ ನಂಃ 102 ಕ್ಷೇತ್ರ 2 ಎಕರೆ ಜಮೀನು ರುದ್ರಪ್ಪನ ಹೆಸರಿನಲ್ಲಿರುತ್ತದೆ ಅಂದರೆ ಸಾಕ್ಷಿದಾರರು ತನ್ನ ಅಜ್ಜ ರುದ್ರಪ್ಪ ತನ್ನ ಹೆಸರಿನಲ್ಲಿ ಖರಿದಿ ಮಾಡಿರುತ್ತಾನೆ ಅಂತಾ ಹೇಳುತ್ತಾರೆ . ರುದ್ರಪ್ಪ ಸದರಿ ಜಮೀನನ್ನು ಮೂಲತಹ ತನ್ನ ಹೆಸರಿನಲ್ಲಿ ಖರಿದಿ ಮಾಡಿದ್ದ ಅನ್ನುವುದು ನಿಜ . ದಾವಾ ಆಸ್ತಿಗಳನ್ನು ಹೊರತು ಪಡಿಸಿ ನನ್ನ ಅಜ್ಜ ರುದ್ರಪ್ಪನ ಹೆಸರಿನಲ್ಲಿ ವೀರಾಪೂರ ಹದ್ದಿಯಲ್ಲಿ ಸರ್ವೆ ನಂಃ 104/2 ಬಿ , ಸರ್ವೆ ನಂಃ 104/2 ಸಿ , ಸರ್ವೆ ನಂಃ 68/1 , ಸರ್ವೆ ನಂಃ 68/2+5 , ಸರ್ವೆ ನಂಃ 68/3 ಹಾಗೂ ಇನ್ನು ಜಮೀನುಗಳಿದ್ದವು ಅನ್ನುವುದು ನಿಜ . ನನ್ನ ಅಜ್ಜ ರುದ್ರಪ್ಪ, ಗಂಗಂಪ್ಪನನ್ನು ದತ್ತಕ ತೆಗೆದುಕೊಂಡ ನಂತರ , ಗಂಗಪ್ಪನ ಹೆಸರು ಮೇಲೆ ಹೇಳಿದ ಅಸ್ತಿಗಳಿಗೆ ದತ್ತಕ ಮಗನಾತೆಯಿಂದ ಎಂ ಇ ನಂಃ 2147 ರಡಿಯಲ್ಲಿ ದಾಖಲಾಗಿರುತ್ತದೆ ಅನ್ನುವುದು ನಿಜ . ಮಲಪ್ರಭಾ ಯೋಜನೆಡಿಯಲ್ಲಿ ವೀರಾಪೂರ ಗ್ರಾಮದ ಜಮೀನುಗಳು ಮುಳುಗಡೆಯಾಗಿರುತ್ತವೆ

ಅನ್ನುವುದು ನಿಜ . ಸರ್ವೆ ನಂಃ 104/2 ಬಿ ಮತ್ತು ಸರ್ವೆ ನಂಃ 104/2 ಸಿ ಎರಡು ಜಮೀನುಗಳ ಪೈಕಿ 3 ಎಕರೆ 3 ಗುಂಟೆ ಜಮೀನು ಮುಳುಗಡೆಯಾಗಿರುತ್ತದೆ ಅಂದರೆ ಸಾಕ್ಷಿದಾರರು ಸರ್ವೆ ನಂಃ 104/2 ಬಿ ಜಮೀನು ಗೌಟಣಗೆ ಸ್ವಾದಿನ ಪಡಿಸಿಕೊಂಡಿರುತ್ತಾರೆ ಅಂತಾ ಹೇಳುತ್ತಾರೆ . ಸ್ವಾದೀನ ಪಡಿಸಿಕೊಂಡ ನಂತರ ಸರ್ವೆ ನಂಃ 104/2 ಬಿ ಜಮೀನಿನ ಪೈಕಿ 18 ಗುಂಟೆ ಜಮೀನು ಮತ್ತು ಸರ್ವೆ ನಂಃ 104/2 ಸಿ ಜಮೀನಿನ ಪೈಕಿ 37 ಗುಂಟೆ ಜಮೀನು ಮಾತ್ರ ಉಳಿದಿರುತ್ತದೆ ಅನ್ನುವುದು ಸುಳ್ಳು , ಆದರೇ ಸರ್ವೆ ನಂಃ 104/2 ಬಿ ಜಮೀನಿನ ಪೈಕಿ 37 ಗುಂಟೆ ಜಮೀನು ಮತ್ತು ರ್ವೆ ನಂಃ 104/2 ಸಿ ಜಮೀನಿನ ಪೈಕಿ 10 ಅಥವಾ 17 ಗುಂಟೆ ಜಮೀನು  ಉಳಿದಿರುತ್ತದೆ ಅಂತಾ ಹೇಳುತ್ತಾರೆ . ಅದಕ್ಕೆ ಪೂರಕವಾಗಿ ನೀವು ಜಮೀನುಗಳ ಉತಾರ ಅಥವಾ ಡೈರಿಗಳನ್ನು ಹಾಜರ ಪಡಿಸಿರುತ್ತಿರಾ ಅಂದರೆ ಸಾಕ್ಷಿದಾರರು ತಾನು ವಕೀಲರ ಹತ್ತಿರ ಕೊಟ್ಟಿದ್ದು , ವಕೀಲರು ಹಾಜರ ಪಡಿಸಿರುತ್ತಾರೋ ಇಲ್ಲವೋ ತನಗೆ ಗೊತ್ತಿರುವುದಿಲ್ಲ ಅಂತಾ ಹೇಳುತ್ತಾರೆ . ಸರ್ವೆ ನಂಃ 104/2 ಬಿ ಪೈಕಿ 37 ಗುಂಟೆ ಮತ್ತು ಸರ್ವೆ ನಂಃ 104/2 ಸಿ ಪೈಕಿ 10 ಗುಂಟೆ ಜಮೀನು ಉಳಿದಿರುತ್ತದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸುಳ್ಳು . ಸರ್ವೆ ನಂಃ 68/1 , ಸಶವೆ ನಂಃ 68/2+5 ಮತ್ತು ಸರ್ವೆ ನಂಃ 68/3 ಮೂರು ಜಮೀನುಗಳು ಸಂಪೂರ್ಣವಾಗಿ ಮುಳುಗಡೆಯಾಗಿರುತ್ತವೆ ಅನ್ನುವುದು ನಿಜ . ಮೇಲೆ ಹೇಳಿದ ಎಲ್ಲ ಜಮೀನುಗಳು ಮತ್ತು ದಾವಾ ಜಮೀನುಗಳು ನನ್ನ ಅಜ್ಜ ರುದ್ರಪ್ಪನ ಪಿತ್ರಾರ್ಜಿತ ಆಸ್ತಿಗಳು ಅನ್ನುವುದು ನಿಜ .

5. ದಾವಾ ಪ್ಲಾಟ ನಂಃ 242/2 ಸರ್ವೆ ನಂಃ 104/2 ಸಿ ಜಮೀನಿನ ಒಂದು ಭಾಗ ಒಂದು ಅನ್ನುವುದು ನಿಜ . ಸರ್ವೆ ನಂಃ 104/2 ಸಿ ಜಮೀನನ್ನು ಸರಕಾರದವರು ಗೌಟಣಗಾಗಿ ಸ್ವಾದೀನ ಪಡಿಸಿಕೊಂಡಿರುತ್ತಾರೆ ಅನ್ನುವುದು ನಿಜ , ಆದರೇ ಅದರ ಪೈಕಿ 10 ಗುಂಟೆ ಜಮೀನು ಉಳಿದಿರುತ್ತದೆ ಅಂತಾ ಹೇಳುತ್ತಾರೆ . ಸರಕಾರದವರು ಗೌಟಣಗಾಗಿ ಸ್ವಾದೀನ ಪಡಿಸಿಕೊಂಡು ಉಳಿದ ಕ್ಷೇತ್ರವೇ ಜಿ ಪಿ ನಂಃ 242/2 ಅನ್ನುವುದು ನಿಜ . ಜಿ ಪಿ ನಂಃ 242/2 ಕ್ಷೇತ್ರ 64 X 280 ft. ಇರುತ್ತದೇ ಅನ್ನುವುದು ನಿಜ .

6. ಟ್ರ್ಯಾಕ್ಟರ ನಂಃ ಕೆಎ-24-1156/1157 ಗಂಗಪ್ಪನ ಹೆಸರಿನಲ್ಲಿರುತ್ತದೆ . ಇವತ್ತಿಗೂ ಕೂಡಾ ಸದರಿ ಟ್ರ್ಯಾಕ್ಟರ ಟ್ರೆಲರ್ ಗಂಗಪ್ಪನ ಹೆಸರಿನಲ್ಲಿರುತ್ತದೆಯೋ ಇಲ್ಲವೂ ಅನ್ನುವುದು ನನಗೆ ಗೊತ್ತಿರುವುದಿಲ್ಲ . ನನ್ನ ತಾಯಿ ಈ ದಾವೆಯನ್ನು ಮಾಡುವ ಸಮಯದಲ್ಲಿ ಸದರಿ ಟ್ರ್ಯಾಕ್ಟರ ಟ್ರೆಲರ್ ಗಂಗಪ್ಪನ ಹೆಸರಿನಲ್ಲಿತ್ತು ಅಂತಾ ತೋರಿಸಲು ದಾಖಲೆಗಳನ್ನು ಹಾಜರ ಪಡಿಸಿರುತ್ತೇನೆ . ಗಂಗಪ್ಪ 2015 ನೇ ಇಸವಿಯಲ್ಲಿ ಸದರಿ ಟ್ರ್ಯಾಕ್ಟರ ಟ್ರೆಲರ್ ನ್ನು ಮಾರಾಟ ಮಾಡಿರುತ್ತಾನೆ ಅನ್ನುವುದು ಸುಳ್ಳು. ಸದರಿ ಟ್ರ್ಯಾಕ್ಟರ ಟ್ರೆಲರ್ ರುದ್ರಪ್ಪ ಅಜ್ಜಪ್ಪನವರ ಮನೆತನಕ್ಕೆ ಸಂಬಂದಪಡದೇ ಇದ್ದರೂ ಕೂಡಾ, ಖೊಟ್ಟಿಯಾಗಿ ಅದನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ ಅನ್ನುವುದು ಸುಳ್ಳು . ನನ್ನ ತಾಯಿ 10 ತೊಲಾ ಬಂಗಾರವನ್ನು ಎಲ್ಲಿ ಮಾರಾಟ ಮಾಡಿರುತ್ತಾಳೆ ಅನ್ನುವುದು ನನಗೆ ಗೊತ್ತಿರುವುದಿಲ್ಲ ಆ ಸಮಯದಲ್ಲಿ ನಾನು 6 ನೇ ವರ್ಗದಲ್ಲಿ ಓದುತ್ತಿದ್ದೆ . 10 ತೊಲಾ ಬಂಗಾರ ಮಾರಾಟ ಮಾಡಿದ ನಂತರ ಎಷ್ಟು ಹಣ ಬಂದಿರುತ್ತದೆ ಅನ್ನುವುದು ನನಗೆ ಗೊತ್ತಿರುವುದಿಲ್ಲ . 10 ತೊಲಾ ಬಂಗಾರವನ್ನು ಮಾರಾಟ ಮಾಡಲು ನನ್ನ ತಾಯಿಯೇ ತನಗೆ ಕೊಟ್ಟಿರುತ್ತಾಳೆ ಅಂತಾ

ತೋರಿಸಲು ಸಾಕ್ಷಿಗಳು ಇರುತ್ತವೆ . ಸಾಕ್ಷಿಗಳು ಶಿವಲಂಗಪ್ಪ ಮೇಟಿ , ವೀರಣಗೌಡಾ ತಿಗಡಿ , ವೀರಭದ್ರಯ್ಯ ಪೂಜಾರ ಅನ್ನುವವರು ಇರುತ್ತಾರೆ . ನನ್ನ ತಾಯಿ 10 ತೊಲಾ ಬಂಗಾರ ಮಾರಾಟ ಮಾಡಿ ಸದರಿ ಟ್ರಾಕ್ಟರ ಟ್ರೇಲರ ಖರಿದಿ ಮಾಡಿರುತ್ತಾರೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸುಳ್ಳು . ಗಂಗಪ್ಪ ಬೆಳಗಾವಿಯ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ , ಎಗ್ರಿಕಲ್ಚರ ಬ್ರಾಂಚ್ ನಲ್ಲಿ ಸಾಲ ಮಾಡಿ ಸದರಿ ಟ್ರಾಕ್ಟರ ನ್ನು ಖರಿದಿ ಮಾಡಿರುತ್ತಾನೆ ಅಂದರೆ ಸಾಕ್ಷಿದಾರರು ಸಾಲ ಮಾಡಿದ್ದು ನಿಜ ಬಂಗಾರ ಮಾರಾಟ ಮಾಡಿ ಖರಿದಿ ಮಾಡಿದ್ದು ಕೂಡಾ ನಿಜ ಅಂತಾ ಹೇಳುತ್ತಾರೆ . 2015 ನೇ ಇಸವಿಯಲ್ಲಿ ಸದರಿ ಬ್ಯಾಂಕಿನ ಸಾಲವನ್ನು ಮರಳಿ ಕೊಡುವ ಉದ್ದೇಶದಿಂದ ಸದರಿ ಟ್ರಾಕ್ಟರ ಟ್ರೇಲರನ್ನು ಗಂಗಪ್ಪ ಮಾರಾಟ ಮಾಡಿರುತ್ತಾನೆ ಅನ್ನುವುದು ಸುಳ್ಳು .

7. ವೀರಾಪೂರ ಗ್ರಾಮದಲ್ಲಿರುವ ಜಿ ಪಿ ನಂಃ ಇ/67 ಯಾರ ಹೆಸರಿನಲ್ಲಿರುತ್ತದೆ ಅಂದರೆ ಸಾಕ್ಷಿದಾರರು ಸದರಿ ಮನೆ ತನ್ನ , ತನ್ನ ತಾಯಿ ಹಾಗೂ ಗಂಗಪ್ಪನ ಹೆಸರಿಲ್ಲಿರುತ್ತದೆ ಅಂತಾ ಹೇಳುತ್ತಾರೆ . ನಮ್ಮ ಹೆಸರು ದಾಖಲಾಗುವ ಪೂರ್ವದಲ್ಲಿ ಸದರಿ ಮನೆ ಯಾರ ಹೆಸರಿನಲ್ಲಿತ್ತು ಅಂತಾ ನನಗೆ ಹೇಳಲು ಬರುವುದಿಲ್ಲ . ಸದರಿ ಮನೆ ಮೂಲತಹ ನನ್ನ ಅಜ್ಜ ರುದ್ರಪ್ಪ ಶಿವರಾಯಪ್ಪ ಅಜ್ಜಪ್ಪನವರ ನ ಆಸ್ತಿಯಾಗಿತ್ತು ಅನ್ನುವುದು ಸುಳ್ಳು . ನನ್ನ ಅಜ್ಜನ ಹೆಸರಿನಲ್ಲಿರುವ ಮನೆ ನಂಬರ ನನಗೆ ಹೇಳಲು ಬರುವುದಿಲ್ಲ . ದಾವಾ ಆಸ್ತಿಗಳ ಕುರಿತು ನನಗೆ ಮಾಹಿತಿ ಇರುತ್ತದೆ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ನಮ್ಮ ಜಮೀನು ಮುಳುಗಡೆಯಾಗಿದ್ದರಿಂದ ಸರಕಾರದವರು ಮನೆ ನಂಃ ಇ/67 ನ್ನು ಕೊಟ್ಟಿರುತ್ತಾರೆ . ನನ್ನ ತಂದೆ ಹೀರೆಬಾಗೇವಾಡಿಯವರಾಗಿದ್ದು , ಅವರ ಆಸ್ತಿಗಳು ಹೀರೆಬಾಗೇವಾಡಿಯಲ್ಲಿದ್ದವು ಅನ್ನುವುದು ನಿಜ

O.S. No. 95/2017
PW- 1
dated: 27-08-2019

. ಹೀರೆಬಾಗೇವಾಡಿಯಲ್ಲಿಯ ಜಮೀನುಗಳು ಹಾಗೂ ಆಸ್ತಿಗಳು ಮಲಪ್ರಭಾ ಯೋಜನೆಡಿಯಲ್ಲಿ ಮುಳುಗಡೆಯಾಗಿರುವುದಿಲ್ಲ ಅನ್ನುವುದು ನಿಜ . ವೀರಾಪೂರ ಮತ್ತು ಅಮರಾಪೂರ ಗ್ರಾಮಗಳಲ್ಲಿ ನನ್ನ ಅಜ್ಜ ಹಾಗೂ ಗಂಗಪ್ಪನನ್ನು ಹೊರತು ಪಡಿಸಿ ನನ್ನ ಹಾಗೂ ನನ್ನ ಇನ್ನುಳಿದ ಸಹೋದರರ ಹೆಸರಿನಲ್ಲಿ ಅಸ್ತಿಗಳು ಇದ್ದಿರಲಿಲ್ಲ ಅನ್ನುವುದು ನಿಜ . ಆ ಕಾರಣಕ್ಕಾಗಿ ಸರಕಾರದಿಂದ ನನಗಾಗಲೀ , ನನ್ನ ಇನ್ನುಳಿದ ಸಹೋದರ ಹಾಗೂ ಸಹೋದರಿಗಾಗಲೀ ಯಾವುದೇ ಪ್ಲಾಟಗಳನ್ನು ಕೊಟ್ಟಿರುವುದಿಲ್ಲ ಅಂದರೆ ಸಾಕ್ಷಿದಾರರು ದೈವದವರು ತನಗೆ ಒಂದು ಪ್ಲಾಟ ಕೊಟ್ಟಿರುತ್ತಾರೆ ಅಂತಾ ಹೇಳುತ್ತಾರೆ . ನನಗೆ ಪ್ಲಾಟ ನಂಬರ ನೆನಪಿರುವುದಿಲ್ಲ . ದೈವದವರು ನನ್ನ ಹೆಸರಿಗೆ ಪ್ಲಾಟನ್ನು ಕೊಟ್ಟಿರುತ್ತಾರೆ ಅಂತಾ ತೋರಿಸಲು ನಾನು ದಾಖಲೆಯನ್ನು ಹಾಜರ ಪಡಿಸಿರುತ್ತೇನೆ. ದೈವದವರು ನನ್ನ ಹೆಸರಿಗೆ ಒಂದು ಪ್ಲಾಟನ್ನು ಕೊಟ್ಟಿರುತ್ತಾರೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸುಳ್ಳು .

ಈ ಹಂತದಲ್ಲಿ ಬಿ ಆರ ಎ ವಕೀಲರು ಸಮಯ ಕೋರಿದ್ದರಿಂದ, ಪಾಟೀ ಸವಾಲು ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿತು)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
SMM
ಬೈಲಹೊಂಗಲ.